Time : 3 hours | Maximum Marks : 250

ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು: 250

# 08/I-Economics 1

## SECTION—A / ವಿಭಾಗ—A

1. Define National Income. What are its concepts? Explain the methods, problems and importance of the estimation of national income. [50 Marks]
ರಾಷ್ಟ್ರೀಯ ವರಮಾನವನ್ನು ವ್ಯಾಖ್ಯಾನಿಸಿರಿ. ಅದರ ಪರಿಕಲ್ಪನೆಗಳು ಯಾವುವು? ರಾಷ್ಟ್ರೀಯ ವರಮಾನವನ್ನು ಅಂದಾಜಿಸುವ ವಿಧಾನಗಳು, ಸಮಸ್ಯೆಗಳು ಮತ್ತು ಪ್ರಾಮುಖ್ಯತೆಯನ್ನು ವಿವರಿಸಿರಿ.

2.(a) What is production function? Explain the three stages of short-run production function and trace the rational and irrational zones graphically. [25 Marks]
ಉತ್ಪಾದನಾ ಕಾರ್ಯ ಎಂದರೇನು? ಅಲ್ಪ ಅವಧಿಯ ಉತ್ಪಾದನಾ ಕಾರ್ಯದ ಮೂರು ಹಂತಗಳನ್ನು ವಿವರಿಸಿ ಮತ್ತು ತಾರ್ಕಿಕ ಹಾಗೂ ಅತಾರ್ಕಿಕ ವಲಯಗಳನ್ನು ನಕಾಶೆಯಲ್ಲಿ ನಿರೂಪಿಸಿ.

2.(b) Explain the features of an Oligopoly market. How is price fixed in an Oligopoly market? [25 Marks]
ಅಲ್ಪಸ್ವಾಮ್ಯ ಮಾರುಕಟ್ಟೆಯ ಲಕ್ಷಣಗಳನ್ನು ವಿವರಿಸಿ ಮತ್ತು ಅಲ್ಪಸ್ವಾಮ್ಯ ಮಾರುಕಟ್ಟೆಯಲ್ಲಿ ದರವು ಹೇಗೆ ನಿರ್ಧಾರವಾಗುತ್ತದೆ?

3. Critically evaluate the concerns and challenges of Indian Banking and bring out the major outcome of the Narasimhan Committee Report. [50 Marks]
ಭಾರತೀಯ ಬ್ಯಾಂಕಿಂಗ್‌ನ ಕಾಳಜಿಗಳು ಮತ್ತು ಸವಾಲುಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪಿಸಿ ಮತ್ತು ನರಸಿಂಹನ್ ಸಮಿತಿಯ ವರದಿಯ ಪ್ರಧಾನ ಫಲಿತಾಂಶವನ್ನು ವಿವರಿಸಿ.

4.(a) Explain briefly the classical theory of income and employment. How does this theory show that a free market economy will automatically adjust to full employment level? [25 Marks]
ಆದಾಯ ಮತ್ತು ಉದ್ಯೋಗದ ಸಾಂಪ್ರದಾಯಿಕ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವಿವರಿಸಿ. ಒಂದು ಮುಕ್ತ ಮಾರುಕಟ್ಟೆ ಆರ್ಥಿಕತೆಯು ಪೂರ್ಣೋದ್ಯೋಗದ ಮಟ್ಟಕ್ಕೆ ಸ್ವಯಂಚಾಲಿತವಾಗಿ ಹೇಗೆ ಹೊಂದಿಕೊಳ್ಳುತ್ತದೆಂಬುದನ್ನು ಈ ಸಿದ್ಧಾಂತವು ಹೇಗೆ ತೋರಿಸುತ್ತದೆ?

4.(b) Discuss the role of monetary policy in the economy of developing countries. [25 Marks]
ಅಭಿವೃದ್ಧಿಶೀಲ ದೇಶಗಳ ಆರ್ಥಿಕತೆಯಲ್ಲಿ ವಿತ್ತೀಯ ನೀತಿಯ ಪಾತ್ರವನ್ನು ಚರ್ಚಿಸಿ.

## SECTION—B / ವಿಭಾಗ—B

5. Trace out the history of Taxation Reforms in India. Critically examine the implication of GST in India. [50 Marks]
ಭಾರತದಲ್ಲಿ ತೆರಿಗೆನೀತಿಯ ಸುಧಾರಣೆಗಳ ಇತಿಹಾಸವನ್ನು ವಿವರಿಸಿ. ಭಾರತದಲ್ಲಿ ಜಿ.ಎಸ್.ಟಿ.ಯ ಪರಿಣಾಮಗಳ ಬಗ್ಗೆ ವಿಮರ್ಶಾತ್ಮಕವಾಗಿ ಪರಿಶೀಲಿಸಿ.

6.(a) Explain the brief history of Budgets and examine critically the need and importance of Budgetary Governance in India. [25 Marks]
ಆಯವ್ಯಯದ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಿ ಮತ್ತು ಭಾರತದಲ್ಲಿ ಆಯವ್ಯಯೀ ಆಳ್ವಿಕೆಯ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

6.(b) Give an account of the performances of Indian Fiscal Policy after Liberalisation. [25 Marks]
ಉದಾರೀಕರಣದ ನಂತರ ಭಾರತೀಯ ವಿತ್ತೀಯ ನೀತಿಯ ಸಾಧನೆಗಳನ್ನು ಕುರಿತು ವಿವರಿಸಿ.

7.(a) Illustrate the general equilibrium effects of a tariff in a large country and a small country with the support of the diagrams. [25 Marks]
ಬೃಹತ್ ಹಾಗೂ ಸಣ್ಣ ರಾಷ್ಟ್ರಗಳಲ್ಲಿನ ಸುಂಕದ ಸಾಮಾನ್ಯ ಸಂತುಲನದ ಪರಿಣಾಮಗಳನ್ನು ರೇಖಾಚಿತ್ರಗಳೊಂದಿಗೆ ನಿರೂಪಿಸಿ.

7.(b) Describe the origin, objectives and achievements of World Bank. Discuss the objectives and lending operations of Asian Development Bank and analyse its organisation. [25 Marks]
ವಿಶ್ವ ಬ್ಯಾಂಕ್‌ನ ಉಗಮ, ಉದ್ದೇಶಗಳು ಮತ್ತು ಸಾಧನೆಗಳನ್ನು ವಿವರಿಸಿ ಹಾಗೂ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ಉದ್ದೇಶಗಳು ಮತ್ತು ಸಾಲಸೌಲಭ್ಯ ಕಾರ್ಯಾಚರಣೆಗಳನ್ನು ಚರ್ಚಿಸಿ ಮತ್ತು ಅದರ ಸಂಘಟನೆಯನ್ನು ವಿಶ್ಲೇಷಿಸಿ.

8.(a) What are meant by the terms ‘devaluation’ ‘depreciation’ ‘revaluation’ and ‘appreciation’? [25 Marks]
‘ಅಪಮೌಲ್ಯನ’ ‘ಮೌಲ್ಯ ಕುಂಠಿತಗೊಳಿಸಿಕೆ’ ‘ಮರುಮೌಲ್ಯಾಂಕನ’ ಮತ್ತು ‘ಮೌಲ್ಯ ಹೆಚ್ಚಳ’ ಎಂದರೇನು?

8.(b) Under what condition is a devaluation or a revaluation is effective in correcting a deficit or a surplus in a nation’s balance of payments? [25 Marks]
ಯಾವ ಸಂದರ್ಭದಲ್ಲಿ ಅಪಮೌಲ್ಯನ ಅಥವಾ ಮರು ಮೌಲ್ಯಾಂಕನವು ಪರಿಣಾಮಕಾರಿಯಾಗಿ ದೇಶದ ಪಾವತಿ ಶಿಲ್ಕಿನ ಕೊರತೆ ಅಥವಾ ಹೆಚ್ಚಳವನ್ನು ಸರಿಪಡಿಸಬಹುದು?

Time : 3 hours | Maximum Marks : 250

ಸಮಯ: 3 ಗಂಟೆಗಳು | ಗರಿಷ್ಠ ಅಂಕಗಳು: 250

# 08/II-Economics 2

## SECTION—A / ವಿಭಾಗ—A

**1.** **What are the uses of organic farming over present day new methods of agricultural practices? What are the problems faced by the farmers of Bt Cotton in India? What is the stand of Genetic Engineering Approval Committee in this regard?** **[50 Marks]**

ಇಂದಿನ ದಿನದ ವ್ಯವಸಾಯದ ಪದ್ಧತಿಗಳ ನೂತನ ವಿಧಾನಗಳಿಗಿಂತ (ಸಾವಯವ) ಜೈವಿಕ ಕೃಷಿಯ ಉಪಯೋಗಗಳೇನು? ಭಾರತದಲ್ಲಿ ಬಿಟಿ ಹತ್ತಿಯ ಅವಲಂಬಿತ ಕೃಷಿಕರು ಎದುರಿಸಿದ ಸಮಸ್ಯೆಗಳು ಯಾವುವು? ಇದಕ್ಕೆ ಸಂಬಂಧಿಸಿದಂತೆ ಜೆನೆಟಿಕ್ (ವಂಶವಾಹಿ) ಇಂಜಿನಿಯರಿಂಗ್ ಅನುಮೋದನಾ ಸಮಿತಿಯ ನಿಲುವುಗಳೇನು?

**2.(a)** **Discuss the issues and performance of public and private partnership programmes in India.** **[25 Marks]**

ಭಾರತದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆ ಕಾರ್ಯಕ್ರಮದ ನಿರ್ವಹಣಾಕಾರ್ಯ ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸಿ.

**2.(b)** **Analyse the important features of Prime Minister's Mudra Bank Loan Yojana (PMMY) in industrialising India.** **[25 Marks]**

ಭಾರತದ ಕೈಗಾರಿಕೀಕರಣದಲ್ಲಿ ಪ್ರಧಾನ ಮಂತ್ರಿಗಳ ಮುದ್ರಾ ಬ್ಯಾಂಕ್ ಸಾಲ ಯೋಜನೆಯ ಪ್ರಮುಖ ಲಕ್ಷಣಗಳನ್ನು ವಿಶ್ಲೇಷಿಸಿ.

**3.** **Trace the industrial development of Karnataka from 1991 to 2000. Do you accept that there are regional variations in industrial development in Karnataka? Explain.** **[50 Marks]**

1991 ರಿಂದ 2000 ದವರೆಗೂ ಕರ್ನಾಟಕದಲ್ಲಿನ ಕೈಗಾರಿಕಾ ಅಭಿವೃದ್ಧಿಯನ್ನು ವಿವರಿಸಿ. ಕರ್ನಾಟಕದ ಕೈಗಾರಿಕಾ ಬೆಳವಣಿಗೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆಯೆಂಬುದನ್ನು ನೀವು ಒಪ್ಪುವಿರಾ? ವಿವರಿಸಿ.

**4.(a)** **Explain the objectives and working of various agricultural flagship programmes of Government of Karnataka.** **[25 Marks]**

ಕರ್ನಾಟಕ ಸರ್ಕಾರದ ವಿವಿಧ ಕೃಷಿಯ ಪ್ರಮುಖ ಕಾರ್ಯಕ್ರಮಗಳ ಧ್ಯೇಯಗಳು ಮತ್ತು ಕಾರ್ಯಶೀಲತೆಯನ್ನು ವಿವರಿಸಿ.

**4.(b)** **Write a contemporary note on Food Security through Public Distribution System (PDS) with reference to Karnataka.** **[25 Marks]**

ಕರ್ನಾಟಕಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಸುರಕ್ಷತೆ ಬಗ್ಗೆ ಸಮಕಾಲೀನ ಟಿಪ್ಪಣಿ ಬರೆಯಿರಿ.

## SECTION—B / ವಿಭಾಗ—B

5. **Discuss in detail the role of Development Financial Institutions (DFIs) in India's economic development.** **[50 Marks]**
ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಅಭಿವೃದ್ಧಿ ಹಣಕಾಸಿನ ಸಂಸ್ಥೆಗಳ ಪಾತ್ರವನ್ನು ವಿಶದವಾಗಿ ಚರ್ಚಿಸಿ.

6.(a) **Describe bank rate policy, open market operation and cash reserve ratio of central bank with their limitation.** **[25 Marks]**
ಕೇಂದ್ರ ಬ್ಯಾಂಕಿನ ಬ್ಯಾಂಕ್ ದರ ನೀತಿ, ಮುಕ್ತ ಪೇಟೆ ಕಾರ್ಯಾಚರಣೆ ಮತ್ತು ನಗದು ಮೀಸಲು ಅನುಪಾತವನ್ನು ಅವುಗಳ ಇತಿಮಿತಿಗಳೊಂದಿಗೆ ವಿವರಿಸಿ.

6.(b) **Analyse the trends in plan and non-plan expenditures in the Union Budget during the last decade (2007-2017).** **[25 Marks]**
ಕಳೆದ ದಶಕ (2007–2017) ದ ಅವಧಿಯಲ್ಲಿ ಕೇಂದ್ರ ಮುಂಗಡ ಪತ್ರದಲ್ಲಿನ ಯೋಜನಾ ಹಾಗೂ ಯೋಜನೇತರ ವೆಚ್ಚಗಳ ಪ್ರವೃತ್ತಿಗಳನ್ನು ವಿಶ್ಲೇಷಿಸಿ.

7.(a) **Discuss the composition, growth and structure of India's foreign trade since 1991.** **[25 Marks]**
1991 ರಿಂದೀಚೆಗಿನ ಭಾರತದ ವಿದೇಶೀ ವ್ಯಾಪಾರದ ಸಂಯೋಜನೆ, ಬೆಳವಣಿಗೆ ಮತ್ತು ರಚನಾ ವ್ಯವಸ್ಥೆಯ ಬಗ್ಗೆ ಚರ್ಚಿಸಿ.

7.(b) **Discuss the vision and strategy for the 12th Five-Year Plan.** **[25 Marks]**
12ನೇ ಪಂಚವಾರ್ಷಿಕ ಯೋಜನೆಯ ದೂರದರ್ಶಿತ್ವ (ನೋಟ) ಹಾಗೂ ಕಾರ್ಯತಂತ್ರಗಳನ್ನು ಕುರಿತು ಚರ್ಚಿಸಿ.

8. **Discuss the achievements of Economic Planning in India, its magnitude of Regional Imbalances and also lack of genuine Regional Planning.** **[50 Marks]**
ಭಾರತದ ಆರ್ಥಿಕ ಯೋಜನೆಯ ಸಾಧನೆಗಳನ್ನು ಚರ್ಚಿಸಿ. ಭಾರತದಲ್ಲಿ ಪ್ರಾದೇಶಿಕ ಅಸಮತೋಲನದ ಪರಿಮಾಣವನ್ನು ಹಾಗೂ ಭಾರತದಲ್ಲಿ ನೈಜ ಪ್ರಾದೇಶಿಕ ಯೋಜನಾ ಕೊರತೆಯ ಬಗ್ಗೆ ಸಹಾ ಚರ್ಚಿಸಿ.